# ಸೈಬರ್ ವಂಚನೆ ಅರಿವು ಕಾರ್ಯಕ್ರಮ



**ಘಟಪ್ರಭಾ: ಶಿರಢಾಣದ ಡಾ। ಗಂಗಾಧರ ಆಂಗ್ಲ ಮಾಧ್ಯಮ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಸೈಬರ್ ವಂಚನೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.**

■ **ಉದಯವಾಣಿ ಸಮಾಚಾರ**

**ಘಟಪ್ರಭಾ:** ಹೆಚ್ಚುತ್ತಿರುವ ಸೈಬರ್ ವಂಚನೆ ಹಾಗೂ ಸುರಕ್ಷತೆಯ ಕುರಿತು ಸಮೀಪದ ಶಿರಢಾಣದ ಡಾ। ಗಂಗಾಧರ ಆಂಗ್ಲ ಮಾಧ್ಯಮ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪುಣೆಯ ಕ್ವಿಕ್ ಹೀಲ್ ಫೌಂಡೇಶನ್ ಹಾಗೂ ನಿಡಸೋಸಿಯ ಎಸ್.ಜೆ.ಪಿ.ಎನ್. ಬಿಸಿಎ ಮಹಾವಿದ್ಯಾಲಯದ ಸೀಮಾ ಕಟ್ಟಿಮನಿ ಹಾಗೂ ಆರತಿ ಶಮನೇವಾಡಿ ಇವರು ವಿದ್ಯಾರ್ಥಿಗಳಿಗೆ ಆನ್‌ಲೈನ್ ಆಟಗಳ ಗೀಳು, ವೈರಸ್ ಹಾವಳಿ, ಹಣಕಾಸು ವಂಚನೆ, ಬೌದ್ಧಿಕ ಸ್ವತ್ತು ವಂಚನೆ, ಅಶ್ಲೀಲ ತಾಣಗಳ ಮೋಸ, ವಿವಾಹ, ಉದ್ಯೋಗ ವಂಚನೆಗಳಿಂದ ಜಾಗೃತರಾಗಿರುವ ಕುರಿತು ತಿಳಿವಳಿಕೆ ಮೂಡಿಸಿದರು. ಓಟಿಪಿ ಹಾಗೂ ಹುಸಿ ಲಿಂಕ್‌ಗಳನ್ನು ನಿಷ್ಕ್ರಿಯಗೊಳಿಸುವ ಕುರಿತು ತಿಳಿ ಹೇಳಲಾಯಿತು. ವಂಚನೆಯ ಗಳಿಗೆಯಲ್ಲಿ ಮೊಬೈಲ್‌ಗಳಲ್ಲಿ ಎರಡು ಹಂತದ ಪರಿಶೀಲನೆಯ ಮಹತ್ವದ ಮನವರಿಕೆ ಮಾಡಿದರು.

ಶಾಲೆಯ ಪ್ರಾಚಾರ್ಯ ಮೇಘರಾಜ ಸಾಂವಗಾಂವ, ಶಿಕ್ಷಕರಾದ ಅಜಿತ ಹೆಗಡೆ, ಸಾಗರ ವಾಳಕಿ, ಮಾರುತಿ ಪಾಟೀಲ, ಶಶಿಧರ ಕರಾಡೆ, ಪೂರ್ಣಿಮಾ ಮೆಳವಂಕಿ, ಪ್ರಭಾವತಿ ಪತ್ತಾರ ಹಾಗೂ ಗಾಯತ್ರಿ ಜಗಜಂಪಿ ಉಪಸ್ಥಿತರಿದ್ದರು.

ನಿಡಸೋಸಿಯ ಎಸ್.ಜೆ.ಪಿ.ಎನ್. ಕಾಲೇಜು ಪ್ರಾಚಾರ್ಯ ಬಸವರಾಜ ಹಾಲಭಾಂವಿ, ಪವನ ಹಿರೇಮಠ, ಆನಂದ ಸೋನಾರ ಕಾರ್ಯಕ್ರಮ ಸಂಯೋಜಿಸಿದ್ದರು.